ಈ) ರಾಜ್ಯದಲ್ಲಿ 2003ನೇ ಸಾಲಿನಲ್ಲಿ ಡೆಂಗಿ ಪ್ರಕರಣಗಳಿಂದ ಇದುವರೆಗೆ ಒಟ್ಟು 7 ಜನರು ಮೃತಪಟ್ಟಿರುತ್ತಾರೆ

ಸಂಶಯಾತ್ಮಕ ಜ್ವರಪೀಡಿತರಿಂದ ರಕ್ತದ ಮಾದರಿಗಳನ್ನು ಸಂಗ್ರಹಿಸಿ, ಬೆಂಗಳೂರಿನ ರಾಷ್ಟ್ರೀಯ ವೈರಾಣು ಸಂಸ್ಥೆಗೆ ಪರೀಕ್ಷೆಗಾಗಿ ಕಳುಹಿಸಿಕೊಡಲಾಗುತ್ತಿದೆ

ಅಲ್ಲದೆ, ಡೆಂಗಿ ಪೀಡಿತ ಜಿಲ್ಲೆಗಳ ಜಿಲ್ಲಾ ಸಮೀಕ್ಷಾ ಘಟಕಗಳಿಗೆ, ತ್ವರಿತ ರಕ್ತಮಾದರಿ ಪರೀಕ್ಷೆಗಾಗಿ, ಡೆಂಗಿ ಪರೀಕ್ಷಾ ಕಿಟ್ಟುಗಳನ್ನು ಸರಬರಾಜು ಮಾಡಲಾಗಿದೆ

ಉ) ಈ ರೋಗವು ಹರಡಲು ಮನೆಯ ಒಳಗೆ ಹಾಗೂ ಸುತ್ತ ಮುತ್ತಲ ಪರಿಸರದಲ್ಲಿ ಇರಿಸಿದ ಸಿಮೆಂಟು ತೊಟ್ಟಿ, ಟೈರು, ತೆಂಗಿನ ಚಿಪ್ಪು, ಬಿಸಾಡಿದ ಪ್ಲಾಸ್ಟಿಕ್ ವಸ್ತುಗಳು ಮುಂತಾದ ಸಣ್ಣ ಸಣ್ಣ ನೀರಿನ ಶೇಖರಣೆಗಳಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುವುದೇ ಮೂಲ ಕಾರಣವಾಗಿರುತ್ತದೆ ಇಂತಹ ಉತ್ಪತ್ತಿ ತಾಣಗಳನ್ನು ಸಮಯ ಪರಿಸರ ನೈರ್ಮಲ್ಯ ಕಾಪಾಡಿಕೊಳ್ಳಲು ಆರೋಗ್ಯ ಇಲಾಖೆ ಮಾತ್ರವಲ್ಲದೆ, ಸ್ಥಳೀಯ ಸಂಸ್ಥೆಗಳು ಪಂಚಾಯತಿಗಳು ಹಾಗೂ ಸಾರ್ವಜನಿಕರ ಸಹಕಾರ ಮತ್ತು ಸಹಭಾಗಿತ್ವ ಅತ್ಯಾವಶ್ಯಕವಾಗಿರುತ್ತದೆ ಈ ನಿಟ್ಟಿನಲ್ಲಿ ಆರೋಗ್ಯ ತರಬೇತಿ ಮುಂತಾದ ಕಾರ್ಯಕ್ರಮವನ್ನು ಇಲಾಖೆಯು ಹಮ್ಮಿಕೊಂಡು ಶಾಶ್ವತ ಪರಿಹಾರಕ್ಕಾಗಿ ಜನಜಾಗೃತಿಯನ್ನು ಮೂಡಿಸಲಾಗುತ್ತಿದೆ

ನಕಲಿ ವೈದ್ಯಕೀಯ ಬಿಲ್ ಕುರಿತು

156 (223) ಶ್ರೀ ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ನೌಕರರು ತಮ್ಮ ವೈದ್ಯಕೀಯ ಖರ್ಚಿನ ಮರುಪಾವತಿ ಸೌಲಭ್ಯಕ್ಕಾಗಿ ನಕಲಿ ಬಿಲ್ ಸೃಷ್ಟಿಸಿರುವುದು ಬೆಳಕಿಗೆ ಬಂದಿದೆಯೇ

ಆ) ಯಾವ ಜಿಲ್ಲೆಯಲ್ಲಿ ಯಾವ ಯಾವ ಇಲಾಖೆಗಳಲ್ಲಿ ಈ ಅಕ್ರಮ ಆಗಿದೆ, ಇದರ ಮೌಲ್ಯವೆಷ್ಟು

ಇ) ಈ ನಕಲಿ ಬಿಲ್ ಸೃಷ್ಟಿಕರ್ತರುಗಳು ಯಾರು, ಇದರಲ್ಲಿ ಭಾಗಿಯಾಗಿರುವವರು ಪತ್ತೆಯಾಗಿರುವವರೇ

ಈ) ಈ ವಂಚನೆಯಲ್ಲಿ ವೈದ್ಯರು ಪಾಲ್ಗೊಂಡಿರುವರೇ ಅಂತಹವರುಗಳ ವಿರುದ್ಧ ಕೈಗೊಂಡ ಕ್ರಮಗಳೇನು

ಉ) ಸದರಿ ಪ್ರಕರಣವು ಬೆಳಕಿಗೆ ಬಂದಿದ್ದು ಹೇಗೆ, ಈ ಜಾಲ ಯಾವಾಗಿನಿಂದ ಈ ಕೃತ್ಯ ವೆಸಗುತ್ತಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಬಿಜಾಪುರ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಈ ಇಲಾಖೆಯ ನೌಕರರು ಹಾಗೂ ಗುಲ್ಬರ್ಗ ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನೌಕರರು ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಆರೋಪದ ಕುರಿತು ತನಿಖೆ ಮಾಡಲಾಗುತ್ತಿದೆ ತನಿಖೆ ಪೂರ್ಣಗೊಂಡ ನಂತರ ಇದರ ಮೌಲ್ಯ ಎಷ್ಟು ಎಂಬುದು ತಿಳಿದು ಬರುತ್ತದೆ

ಆದರೆ ಜಿಲ್ಲಾ ಆಸ್ಪತ್ರೆ, ಗುಲರ್ಗ ಇಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿಯಲ್ಲಿ ಅಕ್ರಮವಾಗಿರುವುದು ಕಂಡು ಬಂದಿದ್ದು ಒಟ್ಟು ಮೌಲ್ಯ ರೂ 21,477–00 ಆಗಿರುತ್ತದೆ

ಇ) ತನಿಖೆ ಪೂರ್ಣಗೊಂಡು ನಂತರ ನಕಲಿ ಬಿಲ್ ಸೃಷ್ಟಿಕರ್ತರು ಯಾರು ಎಂಬುದನ್ನು ಗುರುತಿಸಿ ಇದರಲ್ಲಿ ಭಾಗಿಯಾದವರನ್ನು ಪತ್ತೆ ಮಾಡಲಾಗುವುದು

ಆದರೆ ಸದ್ಯದಲ್ಲಿ ಜಿಲ್ಲಾ ಆಸ್ಪತ್ರೆ, ಗುಲ್ಬರ್ಗದಲ್ಲಿ ಒಂದರಲ್ಲಿ ಮಾತ್ರ ಈ ಕೃತ್ಯದಲ್ಲಿ ಶಾಮೀಲಾಗಿರುವ ಈ ಕೆಳಗಿನ 5 ಮಂದಿ ಸಿಬ್ಬಂದಿಗಳನ್ನು ಗುರುತಿಸಿದ್ದು ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ದಿನಾಂಕ 28 11 2003 ರಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿಡಲಾಗಿದೆ

1 ಶ್ರೀ ಶರಣಪ್ಪ ಹಿರಿಯ ಫಾರ್ಮಸಿಸ್ಟ್
2 ಶ್ರೀ ಸೈಯದ್ ಫಯಾಸ್ ಆಲಿ, ಹಿರಿಯ ಫಾರ್ಮಸಿಸ್ಟ್
3 ಶ್ರೀ ಭಗವಾನ್, ಕಛೇರಿ ಜವಾನ
4 ಶ್ರೀ ದುರ್ಗಯ್ಯ, ಕಛೇರಿ ಜವಾನ
5 ಶ್ರೀ ಶಂಕರ ಕಛೇರಿ ಜವಾನ

ಈ) ತನಿಖೆ ಪೂರ್ಣಗೊಂಡ ನಂತರ ವೈದ್ಯರು ಪಾಲ್ಗೊಂಡಿರುವ ಬಗ್ಗೆ ಪೂರ್ಣ ಮಾಹಿತಿ ಲಭ್ಯವಾಗುತ್ತದೆ ಆದಾಗ್ಯೂ ಸದ್ಯಕ್ಕೆ ಡಾ ಎಸ್ ಎಸ್ ಪಾಟೀಲ್, ವೈದ್ಯರು, ಜಿಲ್ಲಾ ಆಸ್ಪತ್ರೆ ಗುಲ್ಬರ್ಗ ಎಂಬುವರನ್ನು ಈ ಪ್ರಕರಣದಲ್ಲಿ ಗುರುತಿಸಲಾಗಿದೆ ವೈದ್ಯರು ಪಾಲ್ಗೊಂಡಿದ್ದು ಸಾಬೀತಾದಲ್ಲಿ ನಿಯಮಾನುಸಾರ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು

ಉ) ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಮತ್ತು ಕರ್ನಾಟಕ ಲೋಕಾಯುಕ್ತ ಜಾಗೃತ ನಿರ್ದೇಶಕರಿಂದ ಪತ್ರ ಬಂದ ನಂತರ ಹಾಗೂ ಇಲಾಖೆಯಿಂದ ನಡೆಸಿದ ತಪಾಸಣಾ ಸಂದರ್ಭದಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿ ಅಕ್ರಮ ಪ್ರಕಣ ಬೆಳಕಿಗೆ ಬಂದಿರುತ್ತದೆ 2002–03 ನೇ ಸಾಲಿನಿಂದ ಈ ಪ್ರಕರಣವು ಬೆಳಕಿಗೆ ಬಂದಿದೆ

ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯುನಾನಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಕಟ್ಟಡದ ನಿರ್ಮಾಣ ಕಾರ್ಯ

157 (532) ಶ್ರೀ ಸುರೇಶ್ ಕುಮಾರ್ ಎಸ್ (ರಾಜಾಜಿನಗರ) ಮಾನ್ಯ ವೈದ್ಯಕೀಯ ಶಿಕ್ಷಣದ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯುನಾನಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಕಟ್ಟಡದ ನಿರ್ಮಾಣದ ಕಾರ್ಯವನ್ನು ಎಂದು ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು

ಆ) ಒಟ್ಟು ಕಾಮಗಾರಿಯ ವೆಚ್ಚವೆಷ್ಟು?

ಡಾ॥ ಎ ಬಿ ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸರ್ಕಾರಿ ಯುನಾನಿ ವೈದ್ಯಕೀಯ ಕಾಲೇಜಿನ ಕಟ್ಟಡ ನಿರ್ಮಾಣವನ್ನು 1998 ರ ಫೆಬ್ರವರಿಯಲ್ಲಿ ಪ್ರಾರಂಭಿಸಲಾಗಿದೆ ಈ ಕಾಮಗಾರಿಯನ್ನು ಅತಿ ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು

ಆ) ಈ ಕಾಮಗಾರಿಗೆ ಡಿಸೆಂಬರ್ 2003ರ ಅಂತ್ಯದವರೆಗೆ ರೂ 47 83 ಲಕ್ಷ ವೆಚ್ಚವಾಗಿರುತ್ತದೆ